# ಸದಾಶಿವ ಬ್ರಹ್ಮೇಂದ್ರ

ನಾಗೇಶ ರಾವ್ ಎಲ್.ಜಿ.

ಅದ್ವೈತ ಪರಂಪರೆಯ ಸಂತರುಗಳಲ್ಲಿ ಆಧ್ಯಾತ್ಮಿಕ ಉನ್ನತಿಯನ್ನು ಪಡೆದೂ ಕೃತಿರಚನೆ, ಸ್ತೋತ್ರರಚನೆಗಳನ್ನು ಮಾಡಿದ ಮಹಾತ್ಮರಲ್ಲಿ ಒಬ್ಬರು ಸದಾಶಿವ ಬ್ರಹ್ಮೇಂದ್ರರು. ಅವರು ಜೀವನ ಹಾಗೂ ಕೃತಿಯ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಬೆಂಗಳೂರು ಆಶ್ರಮದ ಭಕ್ತರು; ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.



ಸನಾತನ ಧರ್ಮವು ಒಂದು ಜೀವಂತ ಪರಂಪರೆಯಿಂದ ಕೂಡಿದೆ. ಇದರಲ್ಲಿ ಕಾಲಕಾಲಕ್ಕೆ ಬ್ರಹ್ಮಜ್ಞಾನಿಗಳು, ಅವಧೂತರು ಆಗಿ ಹೋಗಿದ್ದಾರೆ. ಅಂತಹ ಗುರುಗಳ ಮಾರ್ಗದರ್ಶನ, ಕೃಪೆ ಪಡೆದ ಶಿಷ್ಯರೂ ಗುರುಗಳಾಗಿದ್ದಾರೆ. ''ಆಚಾರ್ಯಃ ಪೂರ್ವ ರೂಪಂ, ಅಂತೇವಾಸಿ ಉತ್ತರ ರೂಪಂ''. ಈ ಪರಂಪರೆಯಲ್ಲಿ ಬುದ್ಧ, ಬಸವ, ಚೈತನ್ಯ, ಶ್ರೀರಾಮಕೃಷ್ಣ ಮೊದಲಾದವರನ್ನು ಕಾಣುತ್ತೇವೆ. ಸದಾಶಿವ ಬ್ರಹ್ಮೇಂದ್ರರು ಅಂತಹ ಅವಧೂತರಾಗಿದ್ದರು.

ಸದಾಶಿವ ಬ್ರಹ್ಮೇಂದ್ರರು ಹದಿನೆಂಟನೆಯ ಶತಮಾನದಲ್ಲಿ ಪ್ರಸಿದ್ಧರಾಗಿದ್ದ ಒಬ್ಬ ಸಂತರು. ಅವರ ಕಾಲ ಸರಿಯಾಗಿ ತಿಳಿದು ಬಂದಿಲ್ಲ. ಪುದುಕೋಟೆಯ ದೊರೆಯಾಗಿದ್ದ ವಿಜಯ ರಘುನಾಥ ತೊಂಡೈವಾನ್‌ನ ಕಾಲದಲ್ಲಿ, ಕಿ.ಶ. ೧೭೩೦ರಿಂದ ೧೭೬೯, ಅವರು ಇದ್ದರೆಂದು ತಿಳಿದುಬರುತ್ತದೆ. ಅವರು ಜ್ಞಾನಿಗಳೂ, ಕವಿಗಳೂ, ವಾಗ್ಗೇಯಕಾರರೂ ಆಗಿದ್ದರು. ಅವರು ಸಂಸ್ಕೃತದಲ್ಲಿ ರಚಿಸಿರುವ ಕೀರ್ತನೆಗಳು ಇಂದಿಗೂ ಸಂಗೀತಕಾರರ ನಾಲಗೆಯ ಮೇಲೆ ನಲಿಯುತ್ತಿವೆ. ಖ್ಯಾತ ಸಂಗೀತಕಾರರಾಗಿದ್ದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರು ಸದಾಶಿವ ಬ್ರಹ್ಮೇಂದ್ರರ ಕೀರ್ತನೆಗಳನ್ನು ಹಾಡಿ ಜನಪ್ರಿಯಗೊಳಿಸಿದರು.

ತಮಿಳುನಾಡಿನ ತಿರುವಿಸ್ನಾಲೂರ್ ಎಂಬ ಊರಿನಲ್ಲಿ ಸದಾಶಿವ ಬ್ರಹ್ಮೇಂದ್ರರು ಹುಟ್ಟಿದರು. ಇವರ ನಿಜವಾದ ಹೆಸರು ಶಿವ ರಾಮಕೃಷ್ಣ ಎಂದು. ಮಾತೃಭಾಷೆ ತೆಲುಗು. ಊರ ತರುಣರು ಸೇರಿ ಭಜನಾ ಮಂಡಳಿಗಳನ್ನು ಮಾಡಿಕೊಂಡಿದ್ದರು. ಅವರು ದೇವಸ್ಥಾನಗಳಲ್ಲಿ ಭಜನಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದರು. ಶಿವರಾಮನು ಈ ಭಜನಾ ಮಂಡಳಿಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದನು. ಸಂಗೀತ ಸೇವೆ ನಡೆಯುವಲ್ಲಿಗೆ ಹೋಗಿ ಸಂಗೀತವನ್ನು ಕೇಳುತ್ತಿದ್ದನು. ಹಿರಿಯರು ಸಂಗೀತದ ಬಗ್ಗೆ ಚರ್ಚಿಸುವುದನ್ನು ಕೇಳುತ್ತಿದ್ದನು. ಶಿವರಾಮನು ರಾಗಗಳನ್ನು ಗುರುತಿಸುವಷ್ಟು ಪರಿಣತಿಯನ್ನು ಪಡೆದುಕೊಂಡನು. ಸಂಗೀತದ ಜೊತೆಗೆ ದೈವಭಕ್ತಿಯೂ ಬಲವಾಯಿತು.

ಶಿವಜ್ಞಾನಪುರಂ ಎಂಬ ಊರಿನಲ್ಲಿ ವಾಸವಾಗಿದ್ದ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಪರಮಶಿವೇಂದ್ರ ಸರಸ್ವತಿಯವರು ಶಿವರಾಮನಿಗೆ ಗುರುಗಳಾಗಿ ದೊರಕಿದರು. ಅವರ ಸಹವಾಸದಲ್ಲಿ ಹಲವು ವರ್ಷಗಳನ್ನು ಕಳೆದನು. ವೇದ ಉಪನಿಷತ್ತುಗಳ ಅರ್ಥವನ್ನು ಗುರುಗಳ ಮೂಲಕ ತಿಳಿದುಕೊಂಡನು. ವೇದಾಂತದ ಸೂಕ್ಷ್ಮ ವಿಚಾರಗಳನ್ನೂ ಅರಿತನು. ಸಂಗೀತ ಶಾಸ್ತ್ರವನ್ನೂ ಯೋಗಶಾಸ್ತ್ರವನ್ನೂ ಉತ್ಸಾಹ ಮತ್ತು ಶ್ರದ್ಧೆಯಿಂದ ಕಲಿತುಕೊಂಡನು.

ಪ್ರೌಢ ವಯಸ್ಕರಾದಂತೆ ಶಿವರಾಮನು ಎಲ್ಲರ ಗೌರವ, ಆದರಗಳಿಗೆ ಪಾತ್ರನಾದನು. ದೊಡ್ಡ ವಿದ್ವಾಂಸರೆಂದು ಎಲ್ಲರಿಂದಲೂ ಕರೆಸಿಕೊಂಡನು. ಪುದುಕೋಟೆಯ ಮಹಾರಾಜರು ಇವರನ್ನು ಅರಮನೆಯ ಉಪಾಧ್ಯಾಯರನ್ನಾಗಿ ನೇಮಿಸಿಕೊಂಡರು.

ಹದಿನೆಂಟನೆ ಶತಮಾನದ ಪ್ರಾರಂಭದಲ್ಲಿ ಷಹಾಜಿ ಮಹಾರಾಜರು ತಂಜಾವೂರಿನ ದೊರೆಯಾದರು. ಅವರು ಸದಾಶಿವ ಬ್ರಹ್ಮೇಂದ್ರರ ಅಭಿಮಾನಿಯಾಗಿದ್ದರು. ಅವರು ಸದಾಶಿವ ಬ್ರಹ್ಮೇಂದ್ರರಿಗೆ ಷಹಾಜಿರಾಜಪುರಮ್ ಎಂಬ ಊರನ್ನು ಜಹಗೀರಾಗಿ ನೀಡಿದ್ದರೆಂದು ತಿಳಿದುಬರುತ್ತದೆ.

ಶಿವರಾಮನು ಸದಾಶಿವ ಬ್ರಹ್ಮೇಂದ್ರರಾಗಿ ಪರಿವರ್ತಿತರಾದ ಮೇಲೆ ಅವರು ಬೇರೊಂದು ರೀತಿಯಲ್ಲಿ ಬದುಕಲಾರಂಭಿಸಿದರು. ರಾಜಮರ್ಯಾದೆ, ಗೌರವ, ಎಲ್ಲ ಸುಖಭೋಗಗಳನ್ನೂ ತ್ಯಜಿಸಿದರು. ಬ್ರಹ್ಮಸಾಕ್ಷಾತ್ಕಾರ ಅವರ ಜೀವನದ ಗುರಿಯಾಯಿತು. ಚಿಂತೆಯನ್ನು ತೊರೆದರು. ಅವರು ಕಾಡುಮೇಡುಗಳನ್ನು ಅಲೆಯುತ್ತಾ ಹೊರಟರು. ಕರುಣೆ, ಸಮಾನತಾಭಾವ, ಸೋದರ ಭಾವಗಳು ಉಳಿದವು. 'ತರುತಲ ವಾಸಃ ಕರತಲ ಭಿಕ್ಷಾ' ಅವರ ಜೀವನವಾಯಿತು. ಈ ಎಲ್ಲವುಗಳ ಜೊತೆಗೆ ಗುರುಗಳ ಮಾತಿನಂತೆ ಮೌನಿಯಾದರು. ಜೀವನದುದ್ದಕ್ಕೂ ಮೌನಿಯಾಗೇ ಇದ್ದರು. ಇದರಿಂದ ಕೆಲವೊಮ್ಮೆ ತೊಂದರೆ ಅನುಭವಿಸಿದರು. ಎಲ್ಲಾ ಕಡೆ ತಿರುಗಾಡಿ ಕೊನೆಗೆ ಕಾವೇರಿ ತೀರದ ನೇರೂರಿಗೆ ಬಂದರು.

ವೇದ, ಉಪನಿಷತ್ತುಗಳಲ್ಲಿ ಹೇಳಿರುವ ತತ್ತ್ವಗಳನ್ನು ಸದಾಶಿವ ಬ್ರಹ್ಮೇಂದ್ರರು ತಮ್ಮ ಕೀರ್ತನೆಗಳ ಮೂಲಕ ಹೇಳಲು ಪ್ರಯತ್ನ ಮಾಡಿದರು. ದೇವರ ಉಪಾಸನೆ, ಆತ್ಮಜ್ಞಾನ ವಿಷಯ, ಶ್ರೀಕೃಷ್ಣ ಲೀಲೆಗಳು, ಶ್ರೀರಾಮನ ಮಹಿಮೆ, ಜೀವ-ಬ್ರಹ್ಮರ ಸಂಬಂಧ, ಗುರುಸ್ತುತಿ — ಈ ವಿಷಯಗಳನ್ನು ಕುರಿತು ಅವರು ಕೀರ್ತನೆಗಳನ್ನು ರಚಿಸಿದರು. ಅವರ ಕೀರ್ತನೆಗಳು ಸರಳ ಸುಂದರವಾಗಿ ಎಲ್ಲರಿಗೂ ಅರ್ಥವಾಗುವಂತಿವೆ. ಈ ಭಕ್ತಕವಿಯನ್ನು ಎಲ್ಲ ಜನ ಬೇಗನೆ ಗುರುತಿಸಿದರು. ಅವರು 'ಹಂಸ', 'ಪರಮಹಂಸ' ಎಂಬ ಅಂಕಿತನಾಮದಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ಕೆಲವಡೆ 'ಬ್ರಹ್ಮೇಂದ್ರ' ಎಂಬ ಅಂಕಿತವನ್ನು ಬಳಸಿದ್ದಾರೆ.

ಸದಾಶಿವ ಬ್ರಹ್ಮೇಂದ್ರರ ಇಪ್ಪತ್ತಮೂರು ಕೀರ್ತನೆಗಳೂ ಜನಪ್ರಿಯವಾಗಿವೆ. ಕೆಲವನ್ನು ಶ್ರೀರಾಮಕೃಷ್ಣಾಶ್ರಮಗಳಲ್ಲಿ ಹಾಡುತ್ತಾರೆ. ವಾಗ್ಗೇಯಕಾರರಾದವರು ರಾಗಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಕೆಲವು ಇಂತಿವೆ:

ತುಂಗ ತರಂಗೇ ಗಂಗೆ, ಜಯ (ರಾಗ: ಕುಂತಲವರಾಳಿ), ಭಜರೇ ಗೋಪಾಲಂ ಮಾನಸ (ರಾಗ: ಹಿಂದೋಳ), ಸ್ಮರ ವಾರಂ ವಾರಂ ಚೇತಃ (ರಾಗ: ಹಿಂದೂಸ್ಥಾನಿ ಕಾಪಿ), ಬ್ರೂಹಿ ಮುಕುಂದೇತಿ ರಸನೇ (ರಾಗ: ಕುರಂಜಿ), ಮಾನಸ ಸಂಚರೇ ಬ್ರಹ್ಮಣಿ (ರಾಗ: ಸಾಮ) ಗಾಯತಿ ವನಮಾಲಿ ಮಧುರಂ (ರಾಗ: ಮಿಶ್ರ ಕಾಪಿ).. ಇತ್ಯಾದಿ.

ತಮ್ಮ ಗುರುಗಳಾದ ಪರಮಶಿವೇಂದ್ರರ ಕೃಪೆಯಿಂದ ತಮಗೆ ಬ್ರಹ್ಮಾನುಭವ ದೊರಕಿತೆಂದು ಸದಾಶಿವ ಬ್ರಹ್ಮೇಂದ್ರರು ಹೇಳಿಕೊಂಡಿದ್ದಾರೆ. ಈ ಅನುಭವವನ್ನು ಕುರಿತು ಅವರು ಎರಡು ಕೀರ್ತನೆಗಳನ್ನು ರಚಿಸಿದ್ದಾರೆ. ಒಂದು: 'ಪೂರ್ಣ ಬೋಧೋಽಹಂ, ಇನ್ನೊಂದು 'ಆನಂದಪೂರ್ಣ ಬೋಧೋಽಹಂ, ಸದಾನಂದ ಪೂರ್ಣಬೋಧೋಽಹಂ'. ನಾನೇ ನಿರ್ಭೀತ, ನಾನು ಏಕಮೇವಾದ್ವಿತೀಯ ಎಂದು ಅವರು ಈ ಗೀತೆಗಳಲ್ಲಿ ಹೇಳಿದ್ದಾರೆ.

ಸದಾಶಿವ ಬ್ರಹ್ಮೇಂದ್ರರು ಹದಿನೇಳು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳ ವಿವರಗಳನ್ನು ಮುಂದೆ ಕೊಡಲಾಗಿದೆ.

ಹದಿನಾರನೆಯ ಶತಮಾನದಲ್ಲಿದ್ದ ಅಪ್ಪಯ್ಯ ದೀಕ್ಷಿತರು ಶಂಕರ ವೇದಾಂತದ ವಿವಿಧ ವ್ಯಾಖ್ಯಾನಗಳ ಸಂಕಲನವಾದ 'ಸಿದ್ಧಾಂತ ಲೇಶ ಸಂಗ್ರಹ' ಎಂಬ ಗ್ರಂಥವನ್ನು ಬರೆದಿರುತ್ತಾರೆ. ಈ ಗ್ರಂಥದ ಮೇಲೆ ಸದಾಶಿವ ಬ್ರಹ್ಮೇಂದ್ರರು 'ಸಿದ್ಧಾಂತ ಕಲ್ಪವಲ್ಲೀ' ಎಂಬ ಭಾಷ್ಯವನ್ನು ಬರೆದಿದ್ದಾರೆ.

ಶ್ರೀ ಶೃಂಗೇರಿ ಶಾರದಾಪೀಠದ ಜಗದ್ಗುರುಗಳಾಗಿದ್ದ ಶ್ರೀ ಸಚ್ಚಿದಾನಂದ ನರಸಿಂಹಭಾರತಿ ಸ್ವಾಮಿಗಳು ಸದಾಶಿವ ಬ್ರಹ್ಮೇಂದ್ರರನ್ನು ಕುರಿತು 'ಸದಾಶಿವೇಂದ್ರ ಸ್ತುತಿ' ಎಂಬ ನಲುವತ್ತೈದು ಶ್ಲೋಕಗಳ ಒಂದು ಕೃತಿಯನ್ನು ರಚಿಸಿದ್ದಾರೆ.

ಕಂಚಿ ಕಾಮಕೋಟಿ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯರು 'ಸದಾಶಿವ ಬ್ರಹ್ಮೇಂದ್ರ' ಎಂಬ ಹೆಸರಿನಿಂದ ಶಿವರಾಮನನ್ನು ಕರೆದು ಸನ್ಮಾನಿಸಿದರು.

ಸದಾಶಿವ ಬ್ರಹ್ಮೇಂದ್ರರು ಹುಚ್ಚರಾಗಿದ್ದಾರೆ, ದೇಹಪ್ರಜ್ಞೆಯಿಲ್ಲದೆ ತಿರುಗಾಡುತ್ತಿದ್ದಾರೆ ಎಂಬುದಾಗಿ ಪರಮಶಿವೇಂದ್ರರ ಶಿಷ್ಯರು ತಮ್ಮ ಗುರುಗಳಿಗೆ ದೂರು ನೀಡಿದರು. ಶ್ರೀ ಪರಮಶಿವೇಂದ್ರರು ತಾವು ಸದಾಶಿವ ಬ್ರಹ್ಮೇಂದ್ರರ ಗುರುವಾಗಿದ್ದರೂ ತಮಗೆ ಆ ಭಾಗ್ಯ ದೊರೆತಿಲ್ಲ , ತಮಗೆ ಬ್ರಹ್ಮಸಾಕ್ಷಾತ್ಕಾರ ಆಗಲಿಲ್ಲವೆಂದು ದುಃಖಿಸಿದರು.

ಶ್ರೀರಾಮಕೃಷ್ಣ ಪರಮಹಂಸರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಸ್ಮರಿಸಬಹುದು. ಶ್ರೀರಾಮಕೃಷ್ಣರು ಆರು ತಿಂಗಳ ಕಾಲ ನಿರ್ವಿಕಲ್ಪ ಸಮಾಧಿಯ ಬ್ರಹ್ಮಾನಂದದಲ್ಲಿ ಮುಳುಗಿದ್ದರು. ಅವರಿಗೆ ಸಾಮಾನ್ಯ ಪ್ರಜ್ಞೆ ಇರಲಿಲ್ಲ. ಆಗ ಒಬ್ಬ ಸಾಧು ಇವರನ್ನು ಬಲವಂತವಾಗಿ ಎಚ್ಚರಗೊಳಿಸಿ ಅವರ ಬಾಯಿಗೆ ಸ್ವಲ್ಪ ಆಹಾರವನ್ನು ಹಾಕುತ್ತಿದ್ದನು. ಸ್ವಲ್ಪ ಆಹಾರ ಒಳಗೆ ಹೋಗುತ್ತಿತ್ತು. ಹೀಗೆ ಆರು ತಿಂಗಳು ಕಳೆಯಿತು. ಆಗ ಅವರಿಗೆ ತಾಯಿ ದುರ್ಗೆಯ ವಾಣಿ ಕೇಳಿಸಿತು: ''ಲೋಕ ಶಿಕ್ಷಣಕ್ಕಾಗಿ ಭಾವಮುಖದಲ್ಲಿರು; ಲೋಕ ಶಿಕ್ಷಣಕ್ಕಾಗಿ ಭಾವಮುಖದಲ್ಲಿರು'' ಎಂದು. *(ಶ್ರೀರಾಮಕೃಷ್ಣ ಲೀಲಾ ಪ್ರಸಂಗ, ಭಾಗ ೧, ಪುಟ ೪೯೯)* ತಾಯಿ ಭಗವತಿಯ ಆಜ್ಞೆ ಇಲ್ಲದೆ ಹೋಗಿದ್ದರೆ ಶ್ರೀರಾಮಕೃಷ್ಣರು ಲೋಕ ಶಿಕ್ಷಣಕ್ಕೆ ದೊರೆಯುತ್ತಿರಲಿಲ್ಲವೆಂಬುದನ್ನು ಮನಗಾಣಬೇಕು. ಮುಂದೆ ಅವರು ಹೇಗೆ ಸನಾತನ ಧರ್ಮವನ್ನು ಸಂಸ್ಥಾಪನೆ ಮಾಡಿದರು ಮತ್ತು ಅವರ ಶಿಷ್ಯರು ಹೇಗೆ ಅವರ ಉಪದೇಶಗಳನ್ನು ದೇಶವಿದೇಶಗಳಲ್ಲಿ ಸಾರಿದರು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಸದಾಶಿವ ಬ್ರಹ್ಮೇಂದ್ರರ ಕೃತಿಗಳ ಪರಿಚಯವನ್ನು ಕೆಳಗೆ ಕೊಡಲಾಗಿದೆ. ಅವರು ಮೌನವ್ರತವನ್ನು ತಾಳಿದ್ದರೂ ಅನೇಕ ಕೃತಿಗಳನ್ನು ರಚನೆ ಮಾಡಿದ್ದಾರೆ. ಎಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಅವರು ಎಷ್ಟು ಕೃತಿಗಳನ್ನು, ಕೀರ್ತನೆಗಳನ್ನು ರಚನೆ ಮಾಡಿದರೆಂದು ತಿಳಿದಿಲ್ಲ. ದೊರೆತಿರುವ ಅವರ ಹದಿನೇಳು ಕೃತಿಗಳನ್ನು ಇಲ್ಲಿ ಕೊಡಲಾಗಿದೆ.

೧. **ಬ್ರಹ್ಮಸೂತ್ರ ವೃತ್ತಿ** ಅಥವಾ **ಬ್ರಹ್ಮಸೂತ್ರ ಪ್ರಕಾಶಿಕ** : ಶಂಕರ ಭಾಷ್ಯದ ತಾತ್ಪರ್ಯವನ್ನು ಸರಳವಾದ ಭಾಷೆಯಲ್ಲಿ ಪಾಮರರಿಗೂ ಅರ್ಥವಾಗುವಂತೆ ವಿವರಿಸಲಾಗಿದೆ.

೨. **ಯೋಗ ಸುಧಾಕರ** : ಪತಂಜಲಿ ಯೋಗಸೂತ್ರಗಳನ್ನು ಸರಳ ಭಾಷೆಯಲ್ಲಿ ತಿಳಿಸಲಾಗಿದೆ.

೩. **ಉಪನಿಷದ್ ವ್ಯಾಖ್ಯಾನಮ್** ಅಥವಾ **ಕೈವಲ್ಯ ಅಮೃತ ಬಿಂದು** : ಇದು ಹನ್ನೆರಡು ಉಪನಿಷತ್ತುಗಳ ಮೇಲಿನ ಭಾಷ್ಯ. ಇದು ಉಪನಿಷತ್ತುಗಳ ಪ್ರವೇಶಕ್ಕೆ ದಾರಿದೀಪವಾಗಿದೆ.

೪. **ಸಿದ್ಧಾಂತ ಕಲ್ಪವಲ್ಲಿ** : ಅಪ್ಪಯ್ಯ ದೀಕ್ಷಿತರ 'ಸಿದ್ಧಾಂತ ಲೇಶ ಸಂಗ್ರಹ'ದ ಪದ್ಯರೂಪ. ಅದ್ವೈತ ಸಿದ್ಧಾಂತವನ್ನು ವಿವರಿಸುತ್ತದೆ.

೫. **ಕೇಸರಾವಳಿ** : ಇದು ಅವರ 'ಸಿದ್ಧಾಂತಕಲ್ಪವಲ್ಲಿ'ಯ ಮೇಲಿನ ಭಾಷ್ಯ.

೬. **ಅದ್ವೈತ ರಸಮಂಜರಿ** : ಇದರಲ್ಲಿ ೪೪ ಶ್ಲೋಕಗಳಿವೆ. ಅದ್ವೈತ ವೇದಾಂತವನ್ನು ವಿವರಿಸುತ್ತದೆ.

೭. **ಆತ್ಮಾನು ಸಂಧಾನಮ್** : ಇದರಲ್ಲಿ ೩೬ ಶ್ಲೋಕಗಳಿದ್ದು ಆತ್ಮನ ಮೇಲೆ ಧ್ಯಾನಿಸುವ ವಿಧಾನವನ್ನು ವಿವರಿಸುತ್ತದೆ.

೮. **ಆತ್ಮವಿದ್ಯಾ ವಿಲಾಸಂ**: ಬ್ರಹ್ಮಜ್ಞಾನಿಯ ಅನುಭವ, ವರ್ತನೆಗಳನ್ನು ವಿವರಿಸುತ್ತದೆ.

೧೦. **ಶಿವಮಾನಸ ಪೂಜಾ** : ಇದರಲ್ಲಿ ೩೦ ಶ್ಲೋಕಗಳಿವೆ. ಶಿವನ ನಿರ್ಗುಣತತ್ತ್ವ ಮತ್ತು ಸಗುಣ ಪೂಜೆಯನ್ನು ವಿವರಿಸುತ್ತದೆ.

೧೧. **ದಕ್ಷಿಣಾ ಮೂರ್ತಿ ಧ್ಯಾನಮ್** : ಇದರಲ್ಲಿ ೪೫ ಶ್ಲೋಕಗಳಿವೆ. ಆದಿಗುರು ದಕ್ಷಿಣಾ ಮೂರ್ತಿಯ ಸಗುಣ ನಿರ್ಗುಣ ರೂಪಗಳನ್ನು ವಿವರಿಸುತ್ತದೆ.

೧೨. **ಸ್ವಪ್ನೋದಿತಮ್** : ಇದರಲ್ಲಿ ೨೫ ಶ್ಲೋಕಗಳಿವೆ. ಜಗತ್ತಿನ ಸ್ವಪ್ನ ರೂಪದಿಂದ ಶ್ರೀಗುರು ಹೇಗೆ ಅಂತಿಮ ಸ್ವಪ್ನ ಸತ್ಯವನ್ನು ತಿಳಿಸಿಕೊಟ್ಟರು ಎಂಬುದನ್ನು ವಿವರಿಸುತ್ತದೆ.

೧೩. **ನವಮಣಿಮಾಲಾ** : ಇದರಲ್ಲಿ ಹತ್ತು ಶ್ಲೋಕಗಳಿದ್ದು ತಮ್ಮ ಗುರು ಶ್ರೀಪರಮಶಿವೇಂದ್ರರ ಸ್ತುತಿಯಾಗಿದೆ.

೧೪. **ನವಾವರಣ ರತ್ನಮಾಲಾ** : ಇದು ಶಿವಮಹಾದೇವನನ್ನು ಸ್ತುತಿಸುವ ೧೩ ಶ್ಲೋಕಗಳನ್ನು ಹೊಂದಿದೆ.

೧೫. **ಸ್ವಾನುಭೂತಿ ಪ್ರಕಾಶಿಕಾ** : ಇದರಲ್ಲಿ ೧೧ ಶ್ಲೋಕಗಳಿವೆ. ಶಿವಮಹಾದೇವನ ಉಪಾಸನೆಯ ಮಹತ್ವವನ್ನೂ, ಗುರುವಿನ ಕೃಪೆಯ ಅವಶ್ಯಕತೆಯನ್ನೂ ತಿಳಿಸುತ್ತದೆ.

೧೬. **ಮನೋನಿಯಮನಮ್** : ತಮ್ಮ ಮನಸ್ಸಿಗೆ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸುತ್ತಾರೆ. ಆತ್ಮ ಸಂಯಮ ವಿಧಾನವನ್ನು ತಿಳಿಸುತ್ತಾರೆ.

೧೭. **ಪರಮಹಂಸ ಚರ್ಯಾ** : ಯತಿಗಳು, ಬ್ರಹ್ಮನಿಷ್ಠರು ಮತ್ತು ಪರಮಹಂಸರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ವಿವರಿಸುತ್ತದೆ.

ಸದಾಶಿವ ಬ್ರಹ್ಮೇಂದ್ರರು ಸಜೀವ ಸಮಾಧಿಯನ್ನು ಹೊಂದಲು ನಿಶ್ಚಯಿಸಿದರು. ಅದಕ್ಕೆ ದಿನ, ವಾರ, ನಕ್ಷತ್ರಗಳನ್ನು ಗೊತ್ತು ಮಾಡಿದರು. ನೆರೂರಿನ ಬ್ರಾಹ್ಮಣರಿಗೆ ತಕ್ಕ ಸೂಚನೆಗಳನ್ನು ನೀಡಿದರು. ಆಳವಾದ ಗುಂಡಿಯನ್ನು ತೆಗೆಯಲಾಯಿತು. ಅದರಲ್ಲಿ ಹಾಕಲು ಕರ್ಪೂರ, ಅರಿಶಿನ, ವಿಭೂತಿ, ಉಪ್ಪು ಇವುಗಳನ್ನು ಸಿದ್ಧ ಮಾಡಲಾಯಿತು. ನಿಗದಿ ಪಡಿಸಿದ ದಿನ ಈ ಕೌತುಕವನ್ನು ನೋಡಲು ನೂರಾರು ಜನ ಸೇರಿದರು. ಪುದುಕೋಟೆಯ ಮಹಾರಾಜ ಮತ್ತು ತಂಜಾವೂರಿನ ಮಹಾರಾಜ ಶರಭೋಜಿಯೂ ಕೂಡ ಬಂದಿದ್ದರು. ಇದು ಕ್ರಿ.ಶ ೧೭೫೦ ರಿಂದ ೧೭೫೩ರ ನಡುವೆ ನಡೆದಿರಬೇಕೆಂದು ಊಹಿಸಲಾಗಿದೆ. ಬ್ರಾಹ್ಮಣರು ವೇದ ಮಂತ್ರಗಳನ್ನು ಪಠನ ಮಾಡುತ್ತಿದ್ದರು. ಸದಾಶಿವ ಬ್ರಹ್ಮೇಂದ್ರರು ಆ ಗುಂಡಿಯಲ್ಲಿ ಇಳಿದು ಕುಳಿತುಕೊಂಡು ಧ್ಯಾನಸ್ಥರಾದರು. ಅದನ್ನು ವಿಭೂತಿ, ಕರ್ಪೂರ, ಅರಿಶಿನ, ಉಪ್ಪು ಮತ್ತು ಮಣ್ಣುಗಳಿಂದ ಮುಚ್ಚಲಾಯಿತು.

ಮಹಾಸಮಾಧಿಯ ನಂತರ ೧೦-೧೨ ದಿನಗಳಾದ ಮೇಲೆ ಕಾಶಿಯಿಂದ ತಂದಿದ್ದ ಬಾಣಲಿಂಗವನ್ನು ಸ್ವಲ್ಪ ದೂರದಲ್ಲಿ ಸ್ಥಾಪಿಸ ಲಾಯಿತು. ವಿಜಯ ರಘುನಾಥ ತೊಂಡೈವಾನನು ಅಲ್ಲಿ ಒಂದು ಗುಡಿಯನ್ನು ಕಟ್ಟಿಸಿದನು. ಮತ್ತು ನಿತ್ಯಪೂಜೆಗೆ ಅನುಕೂಲ ಮಾಡಿಕೊಟ್ಟನು. ಪೂಜೆಯ ಅನುಕೂಲಕ್ಕಾಗಿ ಎರಡು ಗ್ರಾಮ ಗಳನ್ನು ದಾನವಾಗಿ ಕೊಟ್ಟನು.

ನೆರೂರಿನಲ್ಲಿ ವೈಶಾಖ ಶುದ್ಧ ದಶಮಿಯಂದು ಸದಾಶಿವ ಬ್ರಹ್ಮೇಂದ್ರರ ಆರಾಧನೆ ನಡೆಯುತ್ತದೆ. ಅಲ್ಲಿನ ಸಮಾಧಿ ಸ್ಥಳ. ಬಿಲ್ವವೃಕ್ಷ ಮತ್ತು ಶಿವ ದೇವಾಲಯಗಳನ್ನು ನೋಡಲು ಯಾತ್ರಿಕರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ.

ಸದಾಶಿವ ಬ್ರಹ್ಮೇಂದ್ರರು ಅಷ್ಟ ಸಿದ್ಧಿಗಳನ್ನೂ ಅಲೌಕಿಕ ಶಕ್ತಿಯನ್ನೂ ಹೊಂದಿದ್ದು ಅನೇಕ ಪವಾಡಗಳನ್ನು ಮಾಡಿದ್ದರು. ಅವುಗಳನ್ನು ಇಲ್ಲಿ ವಿವರಿಸಿಲ್ಲ.

ಒಬ್ಬ ಕವಿಯು ತನ್ನ ಕೃತಿಗಳಲ್ಲಿ ಬದುಕಿರುತ್ತಾನೆ ಎಂಬ ಮಾತಿದೆ. ಸದಾಶಿವ ಬ್ರಹ್ಮೇಂದ್ರರು ತಮ್ಮ ಕೃತಿಗಳ ಮೂಲಕ ಅಮರರಾಗಿದ್ದರೆ.